# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 347
ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ
(ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 18.07.2024
ಉತ್ತರಿಸುವ ಸಚಿವರು : ಗೃಹ ಸಚಿವರು

| ಪ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ | ಒಬ್ಬ ವ್ಯಕ್ತಿ ಎಷ್ಟು ಬಂದೂಕುಗಳನ್ನು ಹೊಂದಬಹುದು ರಾಜ್ಯದಲ್ಲಿ ಬೆಳೆ ಮತ್ತು ಸ್ವ-ರಕ್ಷಣೆಗೆ ಬಂದೂಕು ಪರವಾನಗಿ ಪಡೆದುಕೊಂಡವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಶಸ್ತ್ರಾಸ್ತ್ರ ಕಾಯ್ದೆ, 2019 ನಿಯಮ 3, ಉಪ ನಿಯಮ 2 ರಲ್ಲಿ ಒಬ್ಬ ವ್ಯಕ್ತಿ 02 ಬಂದೂಕುಗಳನ್ನು ಹೊಂದಬಹುದಾಗಿರುತ್ತದೆ. ರಾಜ್ಯದಲ್ಲಿ ಬೆಳೆ ಮತ್ತು ಸ್ವ-ರಕ್ಷಣೆಗೆ ಬಂದೂಕು ಪರವಾನಗಿ ಪಡೆದುಕೊಂಡವರ ಸಂಖ್ಯೆ ಜಿಲ್ಲಾವಾರು ಮಾಹಿತಿಯನ್ನು **'ಅನುಬಂಧ-ಅ'** ರಲ್ಲಿ ಒದಗಿಸಲಾಗಿದೆ. |
| ಆ | ಬೆಳೆ ಮತ್ತು ಸ್ವ-ರಕ್ಷಣೆಗೆ ಬಂದೂಕು ಪರವಾನಗಿ ಮಂಜೂರು ಮಾಡುವ ಸಂದರ್ಭದಲ್ಲಿ ಅನುಸರಿಸಲಾಗುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | 1) ಬಂದೂಕು ಪರವಾನಗಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ವ್ಯವಸಾಯದ ಜಮೀನನ್ನು ಹೊಂದಿರಬೇಕು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಬೇಕು.<br>2) ಸದರಿ ಜಮೀನಿನಲ್ಲಿ ವಾಣಿಜ್ಯ ಬೆಳೆ/ಇತರೆ ಬೆಳೆಗಳನ್ನು ಬೆಳೆಯುತ್ತಿರಬೇಕು.<br>3) ಅರ್ಜಿದಾರರು ಸಂಬಂಧಪಟ್ಟ ಠಾಣಾ ಸರಹದ್ದು, ತಾಲ್ಲೂಕಿನ ವ್ಯಾಪ್ತಿಯಲ್ಲಿ ವಾಸವಾಗಿರಬೇಕು.<br>4) ಶಸ್ತ್ರ ಉಪಯೋಗಿಸಲು ತರಬೇತಿಯನ್ನು ಪಡೆದು ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆದಿರಬೇಕು.<br>5) 21 ವರ್ಷ ಮೇಲ್ಪಟ್ಟಿರಬೇಕು ಮತ್ತು 70 ವರ್ಷ ಒಳಗಿದ್ದು ಉಪಯೋಗಿಸಲು ದೈಹಿಕ ಸಾಮರ್ಥ್ಯ ಹೊಂದಿರಬೇಕು.<br>6) ಅರ್ಜಿದಾರರ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿರಬಾರದು.<br>7) ಅರ್ಜಿದಾರರು ವಾಸ ಸ್ಥಳದಲ್ಲಿ ಸನ್ನಡತೆಯಿಂದ ನೆರೆಹೊರೆಯವರೊಂದಿಗೆ ಸ್ನೇಹ ಭಾವದಿಂದ ಜೀವನ ನಡೆಸುತ್ತಿರಬೇಕು.<br>8) ಅರ್ಜಿದಾರರ ಕುಟುಂಬದವರು ಈ ಹಿಂದೆ ಬಂದೂಕು ಪರವಾನಗಿಯನ್ನು ಪಡೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಬೇಕು. |

| | | |
|---|---|---|
| ಇ | ಪರವಾನಗಿ ಪಡೆದ ಬಂದೂಕುಗಳ ದುರುಪಯೋಗ (ಪ್ರಾಣಿಗಳ ಹತ್ಯೆ ಮತ್ತು ಮಾನವ ಹತ್ಯೆ) ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಈ | ಬಂದಿದ್ದಲ್ಲಿ, ಕಳೆದ 5 ವರ್ಷಗಳಲ್ಲಿ ಬಂದೂಕುಗಳು ದುರುಪಯೋಗವಾದ ಪ್ರಕರಣಗಳೆಷ್ಟು; ದುರುಪಯೋಗ ಪಡಿಸಿಕೊಂಡವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು) | ಬಂದೂಕುಗಳನ್ನು ದುರುಪಯೋಗ ಪಡಿಸಿಕೊಂಡವರ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆ, 2019 ರಡಿಯಲ್ಲಿ ಪರವಾನಿಗೆಯನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುತ್ತದೆ.<br><br>ಕಳೆದ 5 ವರ್ಷಗಳಲ್ಲಿ ಬಂದೂಕುಗಳು ದುರುಪಯೋಗವಾದ ಪ್ರಕರಣಗಳ ಜಿಲ್ಲಾವಾರು ವಿವರವನ್ನು **'ಅನುಬಂಧ-ಆ'**ರಲ್ಲಿ ಒದಗಿಸಲಾಗಿದೆ. |
| ಉ) | ರದ್ದುಪಡಿಸಲಾದ ಪರವಾನಗಿಗಳ ಸಂಖ್ಯೆ ಎಷ್ಟು; ಬಂದೂಕುಗಳ ದುರುಪಯೋಗ ತಡೆಯಲು ಹೊಸ ಬಂದೂಕು ಪರವಾನಗಿ ಮತ್ತು ನವೀಕರಣಕ್ಕೆ ಅನುಸರಿಸುತ್ತಿರುವ ಕಟ್ಟುನಿಟ್ಟಿನ ಕ್ರಮಗಳೇನು? (ವಿವರ ನೀಡುವುದು) | ರದ್ದುಪಡಿಸಲಾದ ಬಂದೂಕು ಪರವಾನಗಿಗಳ ಒಟ್ಟು ಸಂಖ್ಯೆ **2339.**<br><br>ಬಂದೂಕುಗಳ ದುರುಪಯೋಗ ತಡೆಯಲು ಹೊಸ ಬಂದೂಕು ಪರವಾನಗಿ ಮತ್ತು ನವೀಕರಣಕ್ಕೆ ಈ ಕೆಳಗಿನಂತೆ ಕ್ರಮಗಳನ್ನು ಅನುಸರಿಸಲಾಗುತ್ತದೆ.<br>1) ಅರ್ಜಿದಾರರ ಮೇಲೆ ಯಾವುದಾದರೂ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆಯೇ ಎಂದು ಪೊಲೀಸ್ ಐ.ಟಿ. ತಂತ್ರಾಂಶದಲ್ಲಿ ಎಂ.ಸಿ.ಸಿ.ಟಿ.ಎನ್.ಎಸ್ ತಂತ್ರಾಂಶದಲ್ಲಿ ಪರಿಶೀಲಿಸಲಾಗುತ್ತದೆ.<br>2) ಪರವಾನಗಿ ಮಂಜೂರು ಅಥವಾ ನವೀಕರಣಕ್ಕೂ ಮುನ್ನಾ ಅರ್ಜಿದಾರರ ಪೂರ್ವ ಚರಿತ್ರೆಯನ್ನು ಪರಿಶೀಲಿಸಲಾಗುತ್ತದೆ.<br>3) ಅರ್ಜಿದಾರರು ಭಾರತದ ಪ್ರಜೆಯಾಗಿರಬೇಕು, ಮಾನಸಿಕ ಅಸ್ವಸ್ಥನಾಗಿರಬಾರದು, ಯಾವುದೇ ಅಪರಾಧಿತ ಹಿನ್ನೆಲೆಯುಳ್ಳವನಾಗಿರಬಾರದು.<br>4) ಪ್ರಾಣ ಬೆದರಿಕೆ ಇರುವಂತಹವರಿಗೆ ಆತ್ಮರಕ್ಷಣೆಗಾಗಿ, ರೈತರಿಗೆ ಬೆಳೆ ರಕ್ಷಣೆ ಮಾಡುವ ಸಲುವಾಗಿ ಹಾಗೂ ಇತರೆ ವಿಚಾರವಾಗಿ ಆಯುಧವನ್ನು ಬಳಸಲು ದೈಹಿಕವಾಗಿ ಸದೃಡವಿರುವ ವ್ಯಕ್ತಿಗೆ ಆಯುಧಗಳ ಪರವಾನಗಿಯನ್ನು ನೀಡಲು ಜಿಲ್ಲಾಧಿಕಾರಿಗಳು ಮಂಜೂರಾತಿ ಪ್ರಾಧಿಕಾರವಾಗಿರುತ್ತಾರೆ. |

ಹೆಚ್‌ಡಿ 103 ಕೆಎಎ 2024

(ಡಾ: ಜಿ. ಪರಮೇಶ್ವರ)

ಗೃಹ ಸಚಿವರು.

## ಅನುಬಂಧ 'ಅ'

| ಕ್ರ.ಸ. | ಘಟಕ | ಬಂದೂಕು ಪರವಾನಗಿ ಪಡೆದುಕೊಂಡವರ ಸಂಖ್ಯೆ: |
|---|---|---|
| 1. | ಬೆಂಗಳೂರು ನಗರ | 7187 |
| 2. | ಮೈಸೂರು ನಗರ | 944 |
| 3. | ಹುಬ್ಬಳ್ಳಿ-ಧಾರವಾಡ ನಗರ | 879 |
| 4. | ಮಂಗಳೂರು ನಗರ | 1786 |
| 5. | ಬೆಳಗಾವಿ ನಗರ | 1403. |
| 6. | ಕಲಬುರಗಿ ನಗರ | 615 |
| 7. | ಬೆಂಗಳೂರು ಜಿಲ್ಲೆ | 3676 |
| 8. | ತುಮಕೂರು ಜಿಲ್ಲೆ | 5215 |
| 9. | ಕೋಲಾರ ಜಿಲ್ಲೆ | 1604 |
| 10. | ರಾಮನಗರ ಜಿಲ್ಲೆ | 2056 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 2535 |
| 12. | ಕೆ.ಜಿ.ಎಫ್. | 538 |
| 13. | ಮೈಸೂರು ಜಿಲ್ಲೆ | 1301 |
| 14. | ಮಂಡ್ಯ ಜಿಲ್ಲೆ | 670 |
| 15. | ಹಾಸನ ಜಿಲ್ಲೆ | 5076 |
| 16. | ಕೊಡಗು ಜಿಲ್ಲೆ | 27515 |
| 17. | ಚಾಮರಾಜನಗರ ಜಿಲ್ಲೆ | 540 |
| 18. | ಬೆಳಗಾವಿ ಜಿಲ್ಲೆ | 6291 |
| 19. | ವಿಜಯಾಪುರ ಜಿಲ್ಲೆ | 2342 |
| 20. | ಧಾರವಾಡ ಜಿಲ್ಲೆ | 1271 |
| 21. | ಬಾಗಲಕೋಟೆ ಜಿಲ್ಲೆ | 931 |
| 22. | ಗದಗ ಜಿಲ್ಲೆ | 450 |
| 23. | ಚಿತ್ರದುರ್ಗ ಜಿಲ್ಲೆ | 1215 |
| 24. | ಹಾವೇರಿ ಜಿಲ್ಲೆ | 495 |
| 25. | ಶಿವಮೊಗ್ಗ ಜಿಲ್ಲೆ | 8393 |
| 26. | ದಾವಣಗೆರೆ ಜಿಲ್ಲೆ | 688 |
| 27. | ದಕ್ಷಿಣ ಕನ್ನಡ ಜಿಲ್ಲೆ | 9173 |
| 28. | ಉತ್ತರ ಕನ್ನಡ ಜಿಲ್ಲೆ | 6370 |
| 29. | ಚಿಕ್ಕಮಗಳೂರು ಜಿಲ್ಲೆ | 11831 |
| 30. | ಉಡುಪಿ ಜಿಲ್ಲೆ | 3207 |
| 31. | ಬಳ್ಳಾರಿ ಜಿಲ್ಲೆ | 869 |
| 32. | ಕಲಬುರಗಿ ಜಿಲ್ಲೆ | 1649 |
| 33. | ಬೀದರ್ ಜಿಲ್ಲೆ | 1078 |
| 34. | ರಾಯಚೂರು ಜಿಲ್ಲೆ | 369 |
| 35. | ಕೊಪ್ಪಳ ಜಿಲ್ಲೆ | 399 |
| 36. | ಯಾದಗಿರಿ ಜಿಲ್ಲೆ | 568 |
| 37. | ವಿಜಯನಗರ ಜಿಲ್ಲೆ | 653 |
| | ಒಟ್ಟು | 121782 |

## ಅನುಬಂಧ 'ಆ'

| ಕ್ರ.ಸ. | ಘಟಕ | ಕಳೆದ 5 ವರ್ಷಗಳಲ್ಲಿ ಬಂದೂಕುಗಳು ದುರುಪಯೋಗವಾದ ಪ್ರಕರಣಗಳ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 13 |
| 2. | ಮೈಸೂರು ನಗರ | 0 |
| 3. | ಹುಬ್ಬಳ್ಳಿ-ಧಾರವಾಡ ನಗರ | 0 |
| 4. | ಮಂಗಳೂರು ನಗರ | 1 |
| 5. | ಬೆಳಗಾವಿ ನಗರ | 0 |
| 6. | ಕಲಬುರಗಿ ನಗರ | 6 |
| 7. | ಬೆಂಗಳೂರು ಜಿಲ್ಲೆ | 7 |
| 8. | ತುಮಕೂರು ಜಿಲ್ಲೆ | 8 |
| 9. | ಕೋಲಾರ ಜಿಲ್ಲೆ | 0 |
| 10. | ರಾಮನಗರ ಜಿಲ್ಲೆ | 3 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 0 |
| 12. | ಕೆ.ಜಿ.ಎಫ್. | 0 |
| 13. | ಮೈಸೂರು ಜಿಲ್ಲೆ | 0 |
| 14. | ಮಂಡ್ಯ ಜಿಲ್ಲೆ | 2 |
| 15. | ಹಾಸನ ಜಿಲ್ಲೆ | 21 |
| 16. | ಕೊಡಗು ಜಿಲ್ಲೆ | 62 |
| 17. | ಚಾಮರಾಜನಗರ ಜಿಲ್ಲೆ | 0 |
| 18. | ಬೆಳಗಾವಿ ಜಿಲ್ಲೆ | 12 |
| 19. | ವಿಜಯಾಪುರ ಜಿಲ್ಲೆ | 13 |
| 20. | ಧಾರವಾಡ ಜಿಲ್ಲೆ | 0 |
| 21. | ಬಾಗಲಕೋಟೆ ಜಿಲ್ಲೆ | 0 |
| 22. | ಗದಗ ಜಿಲ್ಲೆ | 0 |
| 23. | ಚಿತ್ರದುರ್ಗ ಜಿಲ್ಲೆ | 0 |
| 24. | ಹಾವೇರಿ ಜಿಲ್ಲೆ | 0 |
| 25. | ಶಿವಮೊಗ್ಗ ಜಿಲ್ಲೆ | 3 |
| 26. | ದಾವಣಗೆರೆ ಜಿಲ್ಲೆ | 0 |
| 27. | ದಕ್ಷಿಣ ಕನ್ನಡ ಜಿಲ್ಲೆ | 9 |
| 28. | ಉತ್ತರ ಕನ್ನಡ ಜಿಲ್ಲೆ | 9 |
| 29. | ಚಿಕ್ಕಮಗಳೂರು ಜಿಲ್ಲೆ | 16 |
| 30. | ಉಡುಪಿ ಜಿಲ್ಲೆ | 4 |
| 31. | ಬಳ್ಳಾರಿ ಜಿಲ್ಲೆ | 1 |
| 32. | ಕಲಬುರಗಿ ಜಿಲ್ಲೆ | 2 |
| 33. | ಬೀದರ್ ಜಿಲ್ಲೆ | 1 |
| 34. | ರಾಯಚೂರು ಜಿಲ್ಲೆ | 2 |
| 35. | ಕೊಪ್ಪಳ ಜಿಲ್ಲೆ | 0 |
| 36. | ಯಾದಗಿರಿ ಜಿಲ್ಲೆ | 1 |
| 37. | ವಿಜಯನಗರ ಜಿಲ್ಲೆ | 1 |
| | ಒಟ್ಟು | 197 |